ಭಾರತದಲ್ಲಿ ಮೊದಲು ಭೇಟಿ ಕೊಟ್ಟ ನಗರವೆಂದರೆ ಪುರಿ. ಅಲ್ಲಿನ ಸಂಗೀತ ಮಹಾ ವಿದ್ಯಾಲಯದಲ್ಲಿ ನಾನು ಗುರುದೇಬ ಪ್ರಸಾದ್ ಅವರಿಗಾಗಿ ಹುಡುಕಾಡುತ್ತಿದ್ದೆ. ಅವರು ನನ್ನನ್ನು ಮಾತನಾಡಿಸಿ, 'ಯಾರನ್ನು ಹುಡುಕುತ್ತಿದ್ದೆ' ಎಂದು ಪ್ರಶ್ನಿಸಿದಾಗ ನನ್ನ ಆಶಯವನ್ನು ಹೇಳಿದೆ. 'ನಾನೇ ದೇಬಪ್ರಸಾದ್' ಎಂದು ಪರಿಚಯಿಸಿಕೊಂಡ ಅವರು ನೇರವಾಗಿ ತಮ್ಮ ಮನೆಗೆ ಹೋಗುವಂತೆ ಸೂಚಿಸಿದರು. ನಾನು ಗುರು ಗಜೇಂದ್ರ ಕುಮಾರ್ ಪಂಡಾ ಅವರ ನೃತ್ಯಶೈಲಿಯನ್ನೂ ನೋಡಿದ್ದೆ. ಅದರಲ್ಲಿರುವ ಬಳುಕು ಮತ್ತು ಲಾಲಿತ್ಯವನ್ನೂ ಗಮನಿಸಿದ್ದೆ. ದೇಬಪ್ರಸಾದ್ ಅವರ ತಾಂಡವ ಶೈಲಿಯ ಒಡಿಸ್ಸಿ ನೃತ್ಯ ನನಗೆ ಬಹಳ ಹಿಡಿಸಿತು. ಹೆಚ್ಚಿನವರು ಹೇಳುವುದುಂಟು, ನಾನು ಪೂರ್ವಜನ್ಮದಲ್ಲಿ ಯಾವುದೋ ದೇವಸ್ಥಾನದಲ್ಲಿ ನರ್ತಿಸುತ್ತಿದ್ದ ದೇವದಾಸಿ ಆಗಿದ್ದಿರಬೇಕು ಎಂದು. ಹೌದು. ನನ್ನ ಜೀವನವನ್ನು ಒಂದು ಮರದ ಚಿತ್ರಕ್ಕೆ ಹೋಲಿಸಿ ಬರೆಯುವುದಾದರೆ, ಒಡಿಸ್ಸಿ ಎಂಬ ಹಸಿರು ಎಲೆಗಳಿಲ್ಲದೆ ನನ್ನ ಬದುಕು ಪೂರ್ಣವಾಗುವುದು ಸಾಧ್ಯವೇ ಇಲ್ಲ. ಅದು ನನ್ನನ್ನು ಇಡಿಯಾಗಿ ಆವರಿಸಿಕೊಂಡ ಕಲೆಯಾಗಿದೆ.

**◆ ನಿಮ್ಮ ಕಲಾಪಯಣ ಬಹು ದೀರ್ಘವಾದುದು. ಹಿಂತಿರುಗಿ ನೋಡಿದರೆ ತಕ್ಷಣ ಏನೆಲ್ಲ ನೆನಪಾಗುತ್ತದೆ?**

ನಮಗೆ ಯಾವ ಕಲೆಯಾದರೂ ಇಷ್ಟವಾಗುತ್ತದೆ ಎಂದು ಹೇಗೆ ಗುರುತಿಸುವುದು? ಭರತನಾಟ್ಯ ಮತ್ತು ಬ್ಯಾಲೆಯನ್ನು ಅರಿತಿದ್ದ ನನಗೆ ಒಡಿಸ್ಸಿ ನೃತ್ಯದಲ್ಲಿ 'ತ್ರಿಭಂಗ' ಬಹಳ ಹಿಡಿಸಿತು. ಹೆಜ್ಜೆಗಾರಿಕೆಯಲ್ಲಿ ಕಲಾವಿದರು ದೇಹದ ಭಾರವನ್ನು ಆಕರ್ಷಕವಾಗಿ ಸಮತೋಲಗೊಳಿಸಿ ನೃತ್ಯವನ್ನು ಪ್ರಸ್ತುತಪಡಿಸುವ ವಿಧಾನ ನನ್ನ ಮನದಲ್ಲಿ ಅಚ್ಚೊತ್ತಿದಂತೆ ಉಳಿಯಿತು. ಒಡಿಸ್ಸಿ ನೃತ್ಯದಲ್ಲಿ ಪ್ರಧಾನ ಆಕರ್ಷಕ ಅಂಶವೇ ಇದು ಎಂದು ನಾನು ಭಾವಿಸಿದ್ದೇನೆ. ನರ್ತಿಸುವ ಸಂದರ್ಭದಲ್ಲಿ ಅದು ನನ್ನ ಭಾವನೆಗಳನ್ನು ಸಮರ್ಥವಾಗಿ ಪ್ರಸ್ತುತಪಡಿಸಲು ಅವಕಾಶಗಳನ್ನು ಕಲ್ಪಿಸುತ್ತಿದೆ ಎಂಬ ಆತ್ಮವಿಶ್ವಾಸವನ್ನು ಕೊಡುತ್ತದೆ.

ಮೊದಲು ನಾನು ಗುರು ಕೇಳುಚರಣ್ ಮೊಹಪಾತ್ರಾ ಶೈಲಿಯನ್ನು ಅರಿತಿದ್ದರೂ, ನನಗೆ ಗುರು ದೇಬಪ್ರಸಾದ್ ಅವರ ಶೈವ ಮತ್ತು ತಾಂತ್ರಿಕ ಪರಿಕಲ್ಪನೆಗಳತ್ತ ಹೆಚ್ಚು ಒಲವು ಮೂಡಿತು. ಹಾಗೆಂದು ನಮ್ಮ 'ಸೂತ್ರ ಫೌಂಡೇಷನ್'ನಲ್ಲಿ ವೈಷ್ಣವ ಪರಿಕಲ್ಪನೆಗಳನ್ನು ಪ್ರಸ್ತುತ ಪಡಿಸುವುದೇ ಇಲ್ಲವೆಂದುಕೊಳ್ಳಬೇಕಿಲ್ಲ. ಕೃಷ್ಣನನ್ನು ಆರಾಧಿಸುವ ಹಾಡಿಗೆ ನರ್ತಿಸದವರಾರು?

ಕೇಳುಚರಣ್ ಅವರು ರಘುರಾಜ್‌ಪುರದ ಗೊಟ್ಟಿಪುವ ಹಳ್ಳಿಯವರು. ಅಲ್ಲಿ ಎಲ್ಲರೂ ಕೃಷ್ಣನನ್ನು 'ನಟವರ' ಎಂದೇ ಆರಾಧಿಸುವವರು. ಹಾಗಾಗಿ ಅವರ ನೃತ್ಯದಲ್ಲಿಯೂ ವೈಷ್ಣವ ಒಲವು ಇದ್ದಿರಬಹುದು. ಅದು ಹೆಚ್ಚು ಜನಪ್ರಿಯವಾಗಿಯೂ ಗುರುತಿಸಿಕೊಂಡಿದೆ. ಆದರೆ, ದೇಬಪ್ರಸಾದ್ ಅವರು, ಕನಿಷ್ಠ ಬಳಕೆಯ ತತ್ತ್ವವನ್ನು ಹೆಚ್ಚು ನಂಬುತ್ತಾರೆ. ಅವರ ನೃತ್ಯಶೈಲಿಯಲ್ಲಿಯೂ ಅದು ಕಾಣಿಸುತ್ತದೆ, ಹಾಗೆ ನೋಡಿದರೆ ಅಪರೂಪವಾದ ದೇಬಪ್ರಸಾದ್ ಪರಂಪರೆಯನ್ನು ಆಧರಿಸಿದ ಒಡಿಸ್ಸಿಯು ಈಗ ಮಲೇಷ್ಯಾದಲ್ಲಿ ಜನಪ್ರಿಯವಾಗಿದೆ ಎಂದು ಹೇಳಬಹುದು. ಅದನ್ನು ಹೀಗೂ ಹೇಳಬಹುದು: ಜಗತ್ತಿನಲ್ಲಿ ಕೇಳುಚರಣ್ ಮೊಹಪಾತ್ರ ಪರಂಪರೆಯ ಒಡಿಸ್ಸಿ ನೃತ್ಯವೇ ಪ್ರಧಾನವಾಗಿ ಜನಪ್ರಿಯವಾಗಿದೆ. ಆದರೆ, ಮಲೇಷ್ಯಾದಲ್ಲಿ ಮಾತ್ರ ದೇಬಪ್ರಸಾದ್ ಪರಂಪರೆಯು ಪ್ರಸಿದ್ಧವಾಗಿದೆ.

**◆ ಹೊಸ ತಲೆಮಾರಿನ ಕಲಾವಿದರೊಡನೆ ನಿಮ್ಮ ಒಡನಾಟ ಹೆಚ್ಚು. ಎಲ್ಲವೂ ಕ್ಷಿಪ್ರವಾಗಿ ಆಗಿಬಿಡಬೇಕು ಎಂದು ಬಗೆಯುವ ಅವರು ಪರಂಪರೆಯನ್ನು ಹೇಗೆ ಸ್ವೀಕರಿಸುತ್ತಾರೆ?**

ಹೊಸ ತಲೆಮಾರಿನ ಯುವಮನಸ್ಸುಗಳು ಡಿಜಿಟಲ್ ಲೋಕದಲ್ಲಿ ಮುಳುಗಿದವರು. ತ್ವರಿತವಾದ ಸಂತೃಪ್ತಿಯ ನಿರೀಕ್ಷೆಯಲ್ಲಿರುತ್ತಾರೆ ಎಂದು ಆಗಾಗ ಅನಿಸುತ್ತದೆ. ನಾನು ಪ್ರತೀಬಾರಿಯು ಹುಡುಗ ಹುಡುಗಿಯರೊಡನೆ ಮಾತನಾಡುವಾಗ ಅವರಲ್ಲಿ ಅರಿವಿನ ಬೀಜವೊಂದನ್ನು ಬಿತ್ತುವುದಕ್ಕೆ ಸಾಧ್ಯವೇ ಎಂದು ಪ್ರಯತ್ನಿಸುತ್ತಿರುತ್ತೇನೆ. ಪರಂಪರೆಯನ್ನು ಗೌರವಿಸುವ ಮತ್ತು ಪರಿಶ್ರಮದ ಹಾದಿಯನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಆಗುವ ಲಾಭದ ಅರಿವು ಅವರಿಗೆ ದೊರೆಯಬೇಕು ಎಂದು ಆಶಿಸುತ್ತೇನೆ. ಶಾಸ್ತ್ರೀಯ ಕಲಾಪ್ರಕಾರಗಳನ್ನು ಆಯ್ಕೆ ಮಾಡಿಕೊಂಡಮೇಲೆ ಯಶಸ್ಸಿಗೆ ಯಾವುದೇ ಹತ್ತಿರದ